MYSORE LEGISLATIVE ASSEMBLY

TWENTY-SIXTH DAY.

Friday, 13th July 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(To which oral Answers were given).

Repairs to the road from H.A.L. to Hemlur.

*Q.—82. Sri D. MUNICHINNAPPA (Bangalore South).

Will the Government be pleased to state:—

(*a*) whether it has come to their notice that the road from H.A.L. to Hemlur *via* Devarabisanahally and the road from Devarabisanahally to Kannahally in Bangalore South Taluk are in a very bad state of disrepairs;

(*b*) if so, whether they intend to take steps to repair these roads early?

*A.—Sri RAMAKRISHNA HEGDE (Minister for Co-operation and Development).—

(*a*) Yes.

(*b*) These roads yest in the Taluk Development Board, Bangalore South, which is being requested to improve the roads with such finance as it could spend for the purpose.

ಶ್ರೀ ಡಿ. ಮುನಿಚಿನ್ನಪ್ಪ.—ತಾಲ್ಲೂಕ್ ಬೋರ್ಡ್ ಅಭಿವೃದ್ಧಿಗೆ ಸರ್ಕಾರ ಎಷ್ಟು ಸಹಾಯ ಮಾಡಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಂಥ ರಸ್ತೆಯ ದುರಸ್ತಿಯ ಬಗ್ಗೆ ಸರ್ಕಾರದಿಂದ ನೇರವಾಗಿ ಯಾವ ಸಹಾಯವನ್ನೂ ಮಾಡಿಲ್ಲ. ಆದರೆ ಈ ವರ್ಷದ ಬಜೆಟ್ಟಿನಲ್ಲಿ ಈ ತಾಲ್ಲೂಕ್ ಬೋರ್ಡಿನಲ್ಲಿ ೪,೪೦೦ ರೂಪಾಯಿಗಳನ್ನು ಈ ಬೋರ್ಡಿನವರು ರಸ್ತೆ ಅಭಿವೃದ್ಧಿಗಾಗಿ ತೆಗೆದಿಟ್ಟಿದ್ದಾರೆ. ಅದರ ಮೂಲಕ ಖರ್ಚು ಮಾಡಬಹುದು.

ಶ್ರೀ ಕೆ. ಲಕ್ಕಪ್ಪ.—ತಾಲ್ಲೂಕ್ ಬೋರ್ಡಿನ ಹಣ ಸಾಲದೆ ಬಂದಾಗ ಈ ರಸ್ತೆ ರಿಪೇರಿಗೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸದ್ಯಕ್ಕೆ ಅಂಥ ವ್ಯವಸ್ಥೆಯೇನೂ ಇಲ್ಲ. ಕೆಲವು ರಸ್ತೆಗಳನ್ನು ಲೋಕೋಪಯೋಗಿ ಶಾಖೆಯು ರೂರಲ್ ಕಮ್ಯೂನಿಕೇಷನ್ ಕೆಳಗೆ ತೆಗೆದುಕೊಂಡು ಮಾಡುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕ್ ಅಭಿವೃದ್ಧಿ ಸಮಿತಿ ತನ್ನ ಬಜೆಟ್‌ನಿಂದ ಎಷ್ಟು ರಸ್ತೆಗಳನ್ನು ಮೇನ್‌ಟೈನ್ ಮಾಡಬಹುದೆಂದು ಅಂದಾಜು ಮಾಡಲಾಗಿದೆಯೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಪ್ರತಿ ತಾಲ್ಲೂಕ್ ಬೋರ್ಡು ಅಂದಾಜುಮಾಡಿ ತನ್ನ ಶಕ್ತಿಯಿರುವಷ್ಟು ಕೆಲಸ ಮಾಡುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕ್ ಅಭಿವೃದ್ಧಿ ಸಮಿತಿಗೆ ಬರುವ ಆದಾಯವೆಷ್ಟು, ಅದೆಷ್ಟು ರಸ್ತೆಗಳನ್ನು ಮೇನ್‌ಟೇನ್ ಮಾಡಬಹುದು ಎಂದು ಅಂದಾಜು ಘಾಡಲಾಗಿದೆಯೆ ಅಥವಾ ಎಲ್ಲಾ ತಾಲ್ಲೂಕ್ ಬೋರ್ಡಿನ ಮೇಲೇ ಹಾಕಿ ಕಣ್ಣೊರೆಸುವ ಕೆಲಸವನ್ನು ಮಾಡುತ್ತಾ ಇದ್ದೀರೋ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಣ್ಣೊರೆಸುವ ಪ್ರಶ್ನೆಯೇ ಇಲ್ಲ. ಪ್ರತಿ ತಾಲ್ಲೂಕ್ ಬೋರ್ಡಿಗೂ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಿರ್ದಿಷ್ಟವಾದ ಧನ ಸಹಾಯ ಸರ್ಕಾರ ಕೊಡುತ್ತದೆ. ಅದರ ಜೊತೆಗೆ ತಾನೇ ಸ್ವತಃ ತೆರಿಗೆಯ ರೂಪದಲ್ಲಿ ಎಷ್ಟು ಹಣವೆತ್ತಲು ಸಾಧ್ಯವೆಂಬುದನ್ನು ನೋಡಿ ಎಲ್ಲಾ ಒಟ್ಟಿಗೆ ಸೇರಿಸಿ ಎಷ್ಟು ಸಾಧ್ಯವೋ ಅಷ್ಟು ರಸ್ತೆ ಕೆಲಸ, ಶಾಲಾ ಕೆಲಸ ವಗೈರೆ ಅದು ಕೈಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡ.—೪,೪೦೦ ರೂಪಾಯಿಗಳಲ್ಲಿ ಈ ರಸ್ತೆಗೆ ಕೊಡುವುದೆಷ್ಟು?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈ ತಾಲ್ಲೂಕ್ ಬೋರ್ಡಿಗಿರುವ ಮೈಲೇಜ್ ಎಷ್ಟು?

ಶ್ರೀ ರಾಮಕೃಷ ಹೆಗ್ಗಡೆ.—ಅದನ್ನು ಹೇಳುವುದು ಕೂಡ ಕಷ್ಟ.

ಶ್ರೀ ಬಿ. ಹುಚ್ಚೇಗೌಡ.—೪,೪೦೦ ರೂಪಾಯಿಗಳಲ್ಲಿ ಈ ರಸ್ತೆಗೆ ಎಷ್ಟು ಕೊಡುತ್ತೀರೆಂದು ಹೇಳಲು ಸಾಧ್ಯವಿಲ್ಲವೆ?

Sri RAMAKRISHNA HEGDE.—We cannot interfere in the administration of Taluk Boards. It is up to them to spend as they feel necessary and desirable.

ಶ್ರೀ ಬಿ. ಹುಚ್ಚೇಗೌಡ.—ನಾನು ಕೇಳುವುದು out of scope ಅಲ್ಲ. ಅದನ್ನು ಹೇಳದಿದ್ದರೆ ಹೇಗೆ ?

Mr. SPEAKER.—The whole grant is given in one lumpsum and it is not broken up.

Sri RAMAKRISHNA HEGDE.—It is not broken up. They have provided Rs.4,400 for maintenance and repairs of roads including these two roads. These two roads have a total length of 22½ miles.

ಶ್ರೀ ಡಿ. ಮುನಿಚಿನ್ನಪ್ಪ.—೧೫೨ ಮೈಲಿಗಳ ರಸ್ತೆಯಿದೆ. ಹಾಗಿರುವಾಗ ೪,೪೦೦ ರೂಪಾಯಿಗಳಿಂದ ಹೇಗೆ ಅಷ್ಟನ್ನು ಮೇನ್‌ಟೇನ್ ಮಾಡುವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಗುವುದಿಲ್ಲವೆಂಬುದು ಗೊತ್ತಿದೆ. ಅದಕ್ಕಾಗಿ ತಾಲ್ಲೂಕ್‌ಬೋರ್ಡಿನ ಉತ್ಪತ್ತಿಯಾವ ರೀತಿ ಹೆಚ್ಚಿನಬೇಕೆಂಬುದನ್ನು ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಕೆ. ಲಕ್ಕಪ್ಪ.—೪,೪೦೦ ರೂಪಾಯಿಗಳಿಂದ ಎಷ್ಟು ಮೈಲಿ ರಸ್ತೆ ಮಾಡಬಹುದು ?

Sri RAMAKRISHNA HEGDE.—It all depends upon the quality and condition of the road.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಕೇಳಿರುವ ರಸ್ತೆ ಗಾದರೂ ಇಪ್ಪತ್ತೆರಡೂವರೆ ಮೈಲಿ ಇರುವಾಗ ೪,೪೦೦ ರೂಪಾಯಿಗಳು ಸಾಕೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಗಲೇ ಹೇಳಿದೆ. ಹಾಗೆ ನೋಡಿದರೆ ಒಂದು ಮೈಲಿಗೆ ಒಂದು ಲಕ್ಷ ರೂಪಾಯಿಗಳನ್ನು ಬೇಕಾದರೂ ಖರ್ಚು ಮಾಡ ಬಹುದು. ಈಗ ಕೊಟ್ಟಿರುವ ಹಣ ಇಪ್ಪತ್ತೆರಡೂವರೆ ಮೈಲಿಗೆ ಅಥವಾ ಇನ್ನೂ ಹೆಚ್ಚು ರಸ್ತೆ ಮಾಡಲು ಸಾಕು ಎಂದು ಸರ್ಕಾರ ಹೇಳುವುದಿಲ್ಲ. ಆದರೆ ನಮ್ಮ ಲಿಮಿಟೇಷನ್ ಹೇಳಿದ್ದೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಲೋಕಲ್ ಬೋರ್ಡಿಗೆ ಉತ್ಪತ್ತಿ ಸಾಲುತ್ತಿಲ್ಲ, ಹೆಚ್ಚಿಸಲು ಪ್ರಯತ್ನವಿದೆ ಎಂದು ಹೇಳಿದರು. ಇಂಥ ಸಂದರ್ಭದಲ್ಲಿ ಭೂ ಕಂದಾಯವನ್ನು ಪೂರ್ಣವಾಗಿ ಲೋಕಲ್ ಬೋರ್ಡಿಗೆ ಬಿಟ್ಟುಕೊಡುವ ವಿಚಾರವನ್ನು ಆಲೋಚಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಲ್ಲಾ ರೀತಿಯ ಮಾರ್ಗಗಳೂ ಸರ್ಕಾರದ ಆಲೋಚನೆಯಲ್ಲಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿಗೆ ಬಿಡಬಾರದು. ಅದು ಮೇನ್‌ಟೇನ್ ಮಾಡುವುದಕ್ಕಾಗುವುದಿಲ್ಲ ಎಂದು ಈ ಸಭೆ ಸರ್ಕಾರಕ್ಕೆ ತಿಳಿಸಿಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಎರಡು ರಸ್ತೆಗಳ ವಿಚಾರ ಯಾವ ಸಭೆಯೂ ತಿಳಿಸಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಎರಡರ ವಿಚಾರ ಮಾತ್ರವಲ್ಲ. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಗೆ I.V.C. ರಸ್ತೆಗಳೇನಿವೆ ಅವನ್ನು ಒಪ್ಪಿಸಿದಮೇಲೆ ಈ ಸಭೆ ಸರ್ಕಾರದ ಗಮನಕ್ಕೆ ತಂದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸುವುದು ಅಥವಾ ಬಿಡುವ ಪ್ರಶ್ನೆಯಲ್ಲ. ಪಬ್ಲಿಕ್ ವರ್ಕ್ಸ್‌ಗೆ ಸೇರಿದ್ದ ಈ ರಸ್ತೆಗಳು ತಾಲ್ಲೂಕ್ ಬೋರ್ಡಿಗೆ ಅಥವಾ ಗ್ರಾಮ ಪಂಚಾಯತಿಗೆ ತಾನೆ ಸೇರುವುದು ?

Sri ANNARAO GANAMUKHI.—May I know whether all these roads vest in the Taluk Boards by the operation of law or whether they have taken the consent of these Taluk Boards to hand them over to them ?

Sri RAMAKRISHNA HEGDE.—It is quite clear in the Act itself that all the roads which can be called inter-village roads are entrusted to the Taluk Boards for maintenance and repairs.

Sri C. J. MUCKANNAPPA.—Is it not a fact that these roads should not be given to the Taluk Boards in view of the inadequacy of their funds ? Was this matter not brought to the notice of the House and did not the Government promise that this matter would be discussed ?

[No Reply.]

ಶ್ರೀ ಎ. ಕೃಷ್ಣಶೆಟ್ಟಿ.—ಇಂಟರ್ ತಾಲ್ಲೂಕು ರಸ್ತೆಗಳನ್ನು ತಾಲ್ಲೂಕು ಬೋರ್ಡಿಗೆ ಬಿಟ್ಟುಕೊಡ ಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri RAMAKRISHNA HEGDE.—No, Sir.

Sri S. M. KRISHNA.—Has this Taluk Board willingly taken up the maintenance of this road or was it forced on the Taluk Board ?

Sri RAMAKRISHNA HEGDE.—All Taluk Boards are very anxious to take up as many local works as possible, but the only question is whether they are able to spend the required amount. That is the question which is engaging the attention of the Government.

ಶ್ರೀ ಡಿ. ಮುನಿಚಿನ್ನಪ್ಪ.—ಮಾನ್ಯ ಮಂತ್ರಿಗಳು ರಸ್ತೆಗೆ ಹಣಕೊಡುವುದಿಲ್ಲವೆಂದು ಹೇಳುತ್ತಾರೆ, ರೈತರು ರಸ್ತೆಯಲ್ಲಿ ಓಡಾಡಬೇಕೇ ಅಥವಾ ಹಾಗೆಯೇ ಇರಬೇಕೇ ? ಒಂದು ವೇಳೆ ರೈತರು ಆ ರಸ್ತೆಯ ಮೇಲೆ ತಿರುಗಾಡಬೇಕು ಎನ್ನುವುದಾದರೆ ಅದಷ್ಟು ಬೇಗ ದುರಸ್ತು ಮಾಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ರಸ್ತೆಗಳನ್ನು ನಿರ್ಧರಿಸಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಕೆ. ದೇವಯ್ಯ.—ಬೆಂಗಳೂರಿನಲ್ಲಿರತಕ್ಕ ಎಲ್ಲಾ ಐ. ವಿ. ಜಿ. ರೋಡುಗಳನ್ನೂ ಮುನಿಸಿಪಾಲಿಟಿಯವರು ಸುಧಾರಿಸುವುದು ಕಷ್ಟ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಆಯಾ ತಾಲ್ಲೂಕಿನಲ್ಲಿರತಕ್ಕ ರಸ್ತೆಗಳನ್ನು ತಾಲ್ಲೂಕು ಬೋರ್ಡಿನವರೇ ವಹಿಸಿ

ಕೊಳ್ಳುತ್ತಾರೆಂದು ಒಂದು ರೆಸೂಲ್ಯೂಷನ್ ಮಾಡಿ ಅವರು ಅದನ್ನು ಸರ್ಕಾರಕ್ಕೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ತಾಲ್ಲೂಕು ಬೋರ್ಡುಗಳು ರಸ್ತೆಗಳ ವಿಚಾರದಲ್ಲಿ ಅಷ್ಟೇ ಅಲ್ಲ, ಸ್ಕೂಲು ವಿಚಾರದಲ್ಲಿಯೂ ಸಹ ನಾವು ಕೆಲಸ ಮಾಡುತ್ತೇವೆಂದು ಮುಂದೆ ಬರುತ್ತಾರೆ. ಆದರೆ ಆದಕ್ಕೆ ಬೇಕಾಗುವಷ್ಟು ಹಣವನ್ನು ಕೊಡಲು ಅವು ನದ್ಯದ ಪರಿಸ್ಥಿತಿಯಲ್ಲಿ ಇಲ್ಲ.

Cost of Chakkenahally Reservoir scheme in Holenarasipur Taluk.

*Q.—98. Sri H. D. DEVE GOWDA (Holenarasipur).

Will the Government be pleased to state :—

(*a*) the cost of the final estimate of the Chakkenahally Reservoir Scheme in Holenarasipur Taluk ;

(*b*) whether monthly progress is satisfactory ;

(*c*) whether they will take action to complete the work within the prescribed period ;

(*d*) the reasons for increasing the estimate ?

A.—Sri S. NIJALINGAPPA (Chief Minister).—

(*a*) About Rs. 13·55 lakhs.

(*b*) Yes.

(*c*) Efforts are being made to complete the work as early as possible.

(*d*) Due to (i) non-availability of hard foundation at the sanctioned depth ; (ii) changes in the design of spillway, wing walls, earthen flanks ; and (iii) increase in the land compensation charges.

ಶ್ರೀ ಎಚ್. ಡಿ. ದೇವೇಗೌಡ.—ಹೊಳೆನರಸೀಪುರದ ತಾಲ್ಲೂಕಿನಲ್ಲಿರುವ ಚಿಕ್ಕೇನಹಳ್ಳಿ ಜಲಾಶಯದ ಯೋಜನೆಯ ಅಂದಾಜು 13.55 ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ ; ಆದರೆ ಅದು ಎಗ್ಜಿಕ್ಯುಟೀವ್ ಇಂಜಿನಿಯರಿಂದ ಹತ್ತೊಂಬತ್ತು ಲಕ್ಷ ರೂಪಾಯಿಗಳೆಂದು ಪೇಪರ್‌ನಲ್ಲಿ ಬಂದಿದೆ. ಇದರ ಸಮಾಚಾರ ವೇನು ?

†ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಎಸ್ಟಿಮೇಟ್ ಮಾಡಿದಾಗ 13.55 ಲಕ್ಷ ರೂಪಾಯಿಗಳಿತ್ತು. ಕೆಲಸ ಮಾಡುತ್ತಾ, ಮಾಡುತ್ತಾ ಅದು ಜಾಸ್ತಿಯಾಗಿದೆ. ಅಲ್ಲಿ ಜಾಸ್ತಿ ಕೆಲಸ ನಡೆಯಬೇಕಾಗ ತ್ತದೆ. ಅದಕ್ಕೋಸ್ಕರವಾಗಿ ಎಸ್ಟೀಮೇಟ್ ಜಾಸ್ತಿಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಕಂಟ್ರಾಕ್ಟರು ಗಳಿಂದ ಪ್ರತಿಗಳು ಪ್ರೊಗ್ರೆಸ್ ರಿಪೋರ್ಟ್ ಬರುತ್ತದೆ ಅಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನಮ್ಮ ಹತ್ತಿರ ಬರುವುದಿಲ್ಲ, ಚೀಫ್ ಇಂಜಿನಿಯರಿಗೆ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಕಂಟ್ರಾಕ್ಟರು ಗಳಿಂದ ಪ್ರೊಗ್ರೆಸ್ ರಿಪೋರ್ಟ್ ಸರಿಯಾದ ರೀತಿಯಲ್ಲಿ ಬರುತ್ತಿದೆಯೇ ?

Sri S. NIJALINGAPPA.—Yes, certainly, it must be good.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿನ ಕಂಟ್ರಾಕ್ಟರುಗಳಿಂದ ಪ್ರೊಗ್ರೆಸ್ ರಿಪೋರ್ಟ್ ಸರಿಯಾಗಿ ಬರುತ್ತಿಲ್ಲ ಎನ್ನುವ ಬಗ್ಗೆ ಎಗ್ಜಿಕ್ಯುಟೀವ್ ಎಂಜಿನಿಯರ್ ಅವರಿಗೆ ಒಂದು ನೋಟೀಸ್ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದನ್ನು ಯಾವ ತಾರೀಖಿನಲ್ಲಿ ಕಂಟ್ರಾಕ್ಟ್ ಕೊಟ್ಟಿದ್ದಿರಿ, ಅದನ್ನು ಯಾವ ತಾರೀಖಿಗೆ ಮುಗಿಸಬೇಕಾಗಿತ್ತು ?

Sri S. NIJALINGAPPA.—I want notice.

ಶ್ರೀ ಬಿ. ಕೆ. ಪುಟ್ಟಯ್ಯ.—ಆ ಕೆಲಸ ಸಕಾಲದಲ್ಲಿ ಆಗದೆ ಇರುವುದರಿಂದ ಹೆಚ್ಚಿಗೆ ದುಡ್ಡು ಖರ್ಚಾಗ ತ್ತದೆಯಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಆಗುವುದಿಲ್ಲ. ಅದರಲ್ಲಿ ಅನೇಕ ಬದಲಾವಣೆಗಳನ್ನು ಮಾಡಬೇಕಾಗು ತ್ತದೆ. ಅದಕ್ಕೆ ಬೇಕಾದ ಸಾಮಾನುಗಳು ಸರಿಯಾಗಿ ಸಿಕ್ಕುವುದಿಲ್ಲ. ಆದ್ದರಿಂದ ಜಾಸ್ತಿ ಬೆಲೆ ಕೊಟ್ಟು ಬೇರೆ ಕಡೆಯಿಂದ ತರಬೇಕಾಗುತ್ತದೆ. ಆದ್ದರಿಂದ ಖರ್ಚು ಹೆಚ್ಚಾಗುತ್ತದೆ.

Sri G. VENKATAI GOWDA.—I want to know whether the compensation given to the land has increased after the award is passed.

Sri S. NIJALINGAPPA.—I have no idea.

Sri G. VENKATAI GOWDA.—At whose instance these compensation charges were increased ? Is it on the direction of the court ?

Sri S. NIJALINGAPPA.—I want notice.

Sri C. J. MUCKANNAPPA.—When the land was acquired in the first place, what was the award made ?

Sri S. NIJALINGAPPA.—I want notice.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ದಿವಸಗಳಲ್ಲಿ ಯಾವ ತಾರೀಖಿಗೆ ಈ ಕಾಮಗಾರಿಯನ್ನು ಪೂರೈಸ ಬೇಕೆಂದು ಅಗ್ರಿಮೆಂಟಿನಲ್ಲಿದೆ ?

Mr. SPEAKER.—It may be eve before the stipulated period, as earl as possible.

---

†Asterisk indicates that the remarks or speeches have not been revised by the Members concerned.